# ಅಭಿವೃದ್ಧಿಗೆ ಮೂಲಭೂತ ಸೌಕರ್ಯ

HD-04.10

ಬೆಂಗಳೂರು: ಮಹಿಳಾ ಸಬಲೀಕರಣದೊಂದಿಗೆ ಸುಸ್ಥಿರ ಅಭಿವೃದ್ಧಿಗೆ ಭಾರತೀಯ ವಿಜ್ಞಾನ ಕಾಂಗ್ರೆಸ್ ಅಸೋಸಿಯೇಷನ್ ಬದ್ಧವಾಗಿದೆ ಎಂದು ಐಎಸ್‌ಸಿಎಯ ಅಧ್ಯಕ್ಷೆ ಪ್ರೊ.ವಿಜಯಲಕ್ಷ್ಮೀ ಸಕ್ಸೇನಾ ಹೇಳಿದರು.

ಆಕ್ಸ್‌ಫರ್ಡ್ ಕಾಲೇಜ್ ಆಫ್ ಸೈನ್ಸ್ ಹಾಗೂ ಐಎಸ್‌ಸಿಎ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಮಹಿಳಾ ಸಬಲೀಕರಣದೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ನಮ್ಮ ನಗರಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಅಗತ್ಯವು ನೀತಿ ನಿರೂಪಕರಿಗೆ ಒಂದು ದೊಡ್ಡ ಸವಾಲಾಗಿದೆ.

ಸೂರ್ಯನ ಬೆಳಕು, ಗಾಳಿ, ಮಳೆ, ಅಲೆಗಳು, ಜೈವಿಕ ದ್ರವ್ಯಗಳು ಮತ್ತು ಜೈವಿಕ ಇಂಧನಗಳಂತಹ ನೈಸರ್ಗಿಕ ಮೂಲಗಳಿಂದ ಹುಟ್ಟುವ ನವೀಕರಿಸಬಹುದಾದ ಇಂಧನ ಸಂಶೋಧನೆಯಲ್ಲಿನ ಹೂಡಿಕೆಯು ಪ್ರಸ್ತುತವಾಗಿದೆ. ಈಗಾಗಲೇ ಸೋಲಾರ್ ಪ್ಯಾನಲ್‌ಗಳು, ಗಾಳಿ ಟರ್ಬೈನ್‌ಗಳು ಮತ್ತು ಹಸಿರು ಶಕ್ತಿಯ ಇತರ ಮೂಲಗಳ ಬೆಲೆಯನ್ನು ಕಡಿಮೆ ಮಾಡಿದೆ. ಈ ನಿಟ್ಟಿನಲ್ಲಿ ಮಹಿಳೆಯರ ಬಲವರ್ಧನೆಗೆ ಐಎಸ್‌ಸಿಎ ಸಹಕರಿಸಲಿದೆ ಎಂದರು.

ಐಎಸ್‌ಸಿಎ ಸದಸ್ಯರಾದ ಪ್ರೊ. ಗೀತಾ ಬಾಲಿ, ಪ್ರೊ. ಅಶೋಕ್ ಕುಮಾರ್ ಸಕ್ಸೇನಾ, ಮಾಜಿ ಪ್ರೊ.ಎಸ್. ರಾಮಕೃಷ್ಣ ಸೇರಿದಂತೆ ಮತ್ತಿತರರು ಇದ್ದರು.

